# ಅಣ್ಣಾವ್ರ ಸಿನಿಮಾನೇ ಸ್ಫೂರ್ತಿ...

**ಶಿವಮೊಗ್ಗ ಹರೀಶ್**
ಸ್ಟಾರ್ ಸುವರ್ಣದ
'ಸರಸು'ನ
ಸಂಜೀವ



◆ **ಲಾಕ್‌ಡೌನ್ ಸಮಯ ಹೇಗೆ ಕಳೆಯುತ್ತಿದ್ದೀರಿ?**

ಮನೆಯ ಕೆಲಸಗಳನ್ನು ಮಾಡುವುದರ ಜೊತೆ ರಾಜ್ ಕುಮಾರ್ ಅವರ ಸಿನಿಮಾಗಳ ಜೊತೆ ಜಗತ್ತಿನ ಪ್ರಸಿದ್ಧ ಸಿನಿಮಾ– ವೆಬ್ ಸೀರಿಸ್‌ಗಳನ್ನು ನೋಡುತ್ತಿರುತ್ತೇನೆ. ಪ್ರೇಕ್ಷಕನಾಗಿ ಈ ಹಿಂದೆ ರಾಜ್ ಸಿನಿಮಾ ಸವಿದ ನಾನು ಇಂದು ಕಲಾವಿದನಾಗಿ ಪ್ರಾಯೋಗಿಕ ತರಬೇತಿಯನ್ನು ಪಡೆಯುತ್ತಿದ್ದೇನೆ. ಹಾಗಾಗಿ ಮತ್ತೆ ಮತ್ತೆ ಅವರ ಸಿನಿಮಾ ನೋಡುತ್ತೇನೆ. ಸದ್ಯ ನಮ್ಮ ಧಾರಾವಾಹಿಯ ಚಿತ್ರೀಕರಣ ಹೈದ್ರಾಬಾದ್‌ನಲ್ಲಿ ನಡೆಯುತ್ತಿದೆ. ರಾಜ್ಯದಲ್ಲಿ ಅನುಮತಿ ಸಿಗುವ ತನಕ ಅಲ್ಲಿಗೆ ಹೋಗಿ ಬರುತ್ತಿದ್ದೇವೆ.

◆ **ನಿಮಗೆ ರಂಗಭೂಮಿ ಪ್ರೇಮ ಹುಟ್ಟಿದ್ದು ಹೇಗೆ?**

ನನಗೆ ಈ ಕ್ಷೇತ್ರದಲ್ಲಿ ಹೇಗೆ ಆಸಕ್ತಿ ಮೂಡಿತೋ ಗೊತ್ತಿಲ್ಲ. ತಂದೆ ಸರ್ಕಾರಿ ಉದ್ಯೋಗಿ ಆಗಿದ್ದರಿಂದ ಹುಬ್ಬಳ್ಳಿ, ಶಿವಮೊಗ್ಗ ಬಳಿಯ ಕುಂಸಿ, ಬೆಂಗಳೂರಿನಲ್ಲಿ ಓದಿದೆ. ಪದವಿ ಓದುವಾಗ ಉತ್ತರ ಕರ್ನಾಟಕಕ್ಕೆ ಪ್ರವಾಸ ಹೋಗಿದ್ದೆವು. ಅಲ್ಲೊಂದು ಹೋಟೆಲಿಗೆ ಹೋದಾಗ ಗಣೇಶ್ ಬಂದಿದ್ದಾರೆ ಎಂದು ಸುಮಾರಷ್ಟು ಜನ ಬಂದು ಮಾತನಾಡಿಸಿದರು. ಆಮೇಲೆ ಏಕೆ ನಟ ಆಗಬಾರದು ಎನ್ನುವ ಯೋಚನೆ ಬಂತು. ನಂತರ ದಿನ ಪತ್ರಿಕೆಗಳಲ್ಲಿ ಕಲಾವಿದರು ಬೇಕಾಗಿದ್ದರೆ ಎಂಬ ಪ್ರಕಟಣೆಯನ್ನು ನೋಡಿ ಜೂನಿಯರ್ ಆರ್ಟಿಸ್ಟ್ ಆಗಿ ಸುಮಾರು 30 ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದೇನೆ. ಒಮ್ಮೆ ಯಾರೋ ಒಬ್ಬರು ಏಕೆ ನೀವು ಜೂನಿಯರ್ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಿದ್ದೀರಿ. ರಂಗಭೂಮಿ ಅಥವಾ ನಟನೆಯ ತರಬೇತಿ ಪಡೆದು ಬಂದರೆ ಒಳ್ಳೆಯ ಅವಕಾಶಗಳು ಸಿಗುತ್ತವೆ. ಇಲ್ಲದಿದ್ದರೆ ಜೀವನಪೂರ್ತಿ ಹೀಗೆ ಇರಬೇಕಾಗುತ್ತದೆ ಎಂದು ಎಚ್ಚರಿಸಿದರು. ನಂತರ ನೀನಾಸಂ ಹುಡುಕೊಂಡು ಹೋದೆ. ಅಲ್ಲಿನ ಸಂದರ್ಶನ ಪ್ರಕ್ರಿಯೆ ನೋಡಿಯೇ ಬೆದರಿಬಿಟ್ಟಿದ್ದೆ. ನಾನು ಆಯ್ಕೆ ಆಗಲಿಲ್ಲ. ನಂತರ ಶಿವಮೊಗ್ಗಕ್ಕೆ ಬಂದೆ, ಅಲ್ಲಿ ಅಜಯ್ ನೀನಾಸಂ ಎನ್ನುವವರ ಪರಿಚಯ ಆಯಿತು. ಅವರ ತಂಡದಲ್ಲಿ ಸೇರಿ ನಾಟಕ ಮಾಡಿದೆ. ನಂತರ ಸಾಸ್ವೆಹಳ್ಳಿ ಸತೀಶ್ ಅವರ ರಂಗ ತಂಡವನ್ನು ಸೇರಿಕೊಂಡೆ. ರಂಗಭೂಮಿಯಲ್ಲಿ ಒಂದಲ್ಲ ಒಂದು ಕೆಲಸ ಸಿಗ್ತಿತ್ತು. ನಂತರ ಏನು ಎನ್ನುವ ಪ್ರಶ್ನೆಯೂ ಇತ್ತು. ಅದೇ ಸಂದರ್ಭದಲ್ಲಿ ನನ್ನ ಫೇಸ್‌ಬುಕ್ ಪ್ರೊಫೈಲ್ ಗಮನಿಸಿ ಕಲರ್ಸ್‌ನ 'ಶಾಂತಂ ಪಾಪಂ'ನ ಎರಡು ಕಂತಿನಲ್ಲಿ ನಟಿಸುವ ಅವಕಾಶ ಬಂತು. ಆಮೇಲೆ ಝೀ ಕನ್ನಡಕ್ಕೆ 'ವಿಷ್ಣು ದಶಾವತಾರ' ಆಡಿಷನ್ ನಿಡಲು ಮುಂಬೈಗೆ ಹೋಗಿ ಬಂದೆ. ನಂತರ ಒಂದಲ್ಲ ಒಂದು ಆಡಿಷನ್ ನೀಡ್ತಿದ್ದೆ. ಕಲರ್ಸ್‌ನಲ್ಲಿ 'ಶನಿ'ಗೆ ಅವಕಾಶ ಸಿಕ್ಕಿತು. ಆಮೇಲೆ 'ರಕ್ಷಬಂಧನ', 'ಯಜಮಾನಿ', 'ಗಿಳಿರಾಮ' ಧಾರಾವಾಹಿಗಳಲ್ಲಿ ಮಾಡಿದೆ. 'ಕೌಟಿಲ್ಯ' ಮತ್ತು 'ಒಲ್ಡ್ ಮಂಕ್' ಸಿನಿಮಾಗಳಲ್ಲಿಯೂ ನಟಿಸಿದೆ. ಈ ಎಲ್ಲದಕ್ಕೂ ರಂಗಭೂಮಿ ಕಾರಣ ಆಯಿತು. ಈಗ 'ಉಚಿತ ಕಲಾ ತಂಡ'ವನ್ನು ಕಟ್ಟಿಕೊಂಡಿದ್ದೇನೆ.

◆ **ಸಿನಿಮಾ– ಟೀವಿ– ರಂಗಭೂಮಿ ಈ ಎಲ್ಲದರಲ್ಲೂ ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತೀರಿ?**

ರಂಗಭೂಮಿ ಪ್ರಪಂಚವೇ ಬೇರೆ. ಅಲ್ಲಿ ಎಲ್ಲ ಪ್ರೇಕ್ಷಕರಿಗೂ ಧ್ವನಿ ಕೇಳುವಂತೆ ನಟಿಸಬೇಕಾಗುತ್ತದೆ. ಅಲ್ಲಿಂದ ಕಿರುತೆರೆಗೆ ಬಂದ ನನಗೆ ತುಂಬ ಕಷ್ಟ ಆಯ್ತು. ರಂಗಭೂಮಿ ಆತ್ಮ ವಿಶ್ವಾಸವನ್ನು ಬೆಳೆಸುತ್ತದೆ. ಆದರೆ ಆ ಪಾತ್ರದಲ್ಲಿ ಒಳಗೊಳ್ಳುವಿಕೆಯ ಹೊಣೆ ಹೆಚ್ಚಿರುತ್ತದೆ. ಆದರೆ ಇಲ್ಲಿ ಅಷ್ಟು ಭಾವಪರವಶ ಆಗುವ ಅಗತ್ಯ ಇಲ್ಲ. ಈ ಕಾರಣಕ್ಕೆ ಮೊದಲು ಕೆಲವೊಮ್ಮೆ ನಾನು ಬೈಸಿಕೊಂಡಿದ್ದೇನೆ. 'ಕ್ಯಾಮೆರಾ ಇಷ್ಟಿದೆ, ನಿನಗೆ ಇಷ್ಟು ಸ್ಪೇಸ್ ಇದೆ ಆ ಫ್ರೇಮ್‌ನಲ್ಲಿಯೇ ಇರಬೇಕು' ಎಂದೂ ಹೇಳಿಸಿಕೊಂಡಿದ್ದೇನೆ. ರಂಗಭೂಮಿಯಷ್ಟು ಸ್ವಾತಂತ್ರ್ಯ, ಕೂಗಾಟ– ಚೀರಾಟಕ್ಕೆ ಟೀವಿಯಲ್ಲಿ ಅವಕಾಶ ಇರಲ್ಲ. ಸಿನಿಮಾದ್ದೇ ಬೇರೆ ವ್ಯಾಕರಣ ಇರುತ್ತದೆ. ಧಾರಾವಾಹಿಯಂತೆ ಕ್ಲೋಸ್‌ಅಪ್ ಶಾಟ್ ಇರಲ್ಲ. ಸಾಮಾನ್ಯವಾಗಿ ರಂಗಭೂಮಿ ಕಲಾವಿದರಿಗೆ ಸಿನಿಮಾ–ಟೀವಿಯ ನಟನೆ ತುಂಬ ಸುಲಭ ಆಗುತ್ತದೆ ಎಂಬ ಲೋಕರೂಢಿಯ ಮಾತಿದೆ. ವಾಸ್ತವ ಅಷ್ಟು ಸರಳ ಇರುವುದಿಲ್ಲ. ಅನುಭವ ಆಗುತ್ತಾ ಎಲ್ಲ ಕಲಿಯುತ್ತಾ ಬೆಳೆಯುತ್ತೇವೆ.

◆ **ಸರಸುನಲ್ಲಿ ನಿಮ್ಮ ಪಾತ್ರದ ಪ್ರಾಮುಖ್ಯತೆ ಏನು?**

ಬಂಗಾರದ ಕಳಸ– ಶಾಂತು ಎಂದೂ ನನ್ನನ್ನು ಕರೆಯುತ್ತಾರೆ. ನಾಯಕಿಯ ತಮ್ಮನ ಪಾತ್ರವನ್ನು ಮಾಡುತ್ತಿದ್ದೇನೆ. ಇದುವರೆಗೆ ಏಳು ಧಾರಾವಾಹಿಗಳಲ್ಲಿ ಮಾಡಿದ್ದೇನೆ. 'ಶನಿ' ನನಗೊಂದು ಇಮೇಜ್ ತಂದು ಕೊಟ್ಟಿತು. ಅದು ಅಷ್ಟು ಪ್ರಸಿದ್ಧ ಆಗಲು 'ಮಜಾಟಾಕೀಸ್'ನಲ್ಲಿ ಭಾಗವಹಿಸಿದ್ದು. ಅದರ ನಂತರ ದೊಡ್ಡ ಇಮೇಜನ್ನು 'ಗಿಳಿರಾಮ' ಕೊಟ್ಟಿದೆ. ಅದೆಲ್ಲದಕ್ಕಿಂತ ಇದು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ. ನಾಯಕಿಯ ತಮ್ಮನಾಗಿ ಕಾಣಿಸಿಕೊಳ್ಳುವುದು ಎಲ್ಲರ ಗಮನ ಸೆಳೆದಿದೆ. ಇಲ್ಲಿ ನನ್ನ ತಂದೆಯ ಜೊತೆ ಕೂಡ ಉತ್ತಮ ಬಾಂಧವ್ಯ ನಿಭಾಯಿಸುತ್ತಿದ್ದೇನೆ. ಒಟ್ಟಾರೆ ಕಥೆಯಲ್ಲಿ ಮಹತ್ವದ ಪಾತ್ರವನ್ನು ಸಂಜೀವನಾಗಿ ನಿರ್ವಹಿಸುತ್ತಿದ್ದೇನೆ.

■ **ರಾಘವೇಂದ್ರ ಕೆ.**